**ಬಿಸಿಲು ಬೆಳದಿಂಗಳು - 161 / ವಿಜಯ ಕರ್ನಾಟಕ (7.4.2011)**

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# ಕ್ರಿಕೆಟ್ ಮತ್ತು ಯುಗಾದಿ

ಎಲ್ಲರ ಕಣ್ಣುಗಳೂ ಒಂದೆಡೆ ದಿಟ್ಟಿಸಿದ್ದವು. ಹಿಂದಿನ ದಿನ ಭೂಮಿಯ ಅಂಗಳದಲ್ಲಿದ್ದರೆ ಮಾರನೆಯ ದಿನ ಆಗಸದಲ್ಲಿ. ಎರಡೂ ಸಂದರ್ಭಗಳಲ್ಲಿ ಕಾತುರತೆ, ಆತಂಕ, ಮೈಮರವೆ; ನಾಮುಂದು ನೀಮುಂದು ಎಂಬ ಪೈಪೋಟಿ. ಕಂಡೊಡನೆ ಹೋ..! ಎಂಬ ಉದ್ಗಾರ. ಕಣ್ಣೆವೆಯಿಕ್ಕದೆ ತುದಿಗಾಲ ಮೇಲೆ ನಿಂತು ಅಷ್ಟೊಂದು ಸಂಭ್ರಮ ಮತ್ತು ತನ್ಮಯತೆಯಿಂದ ಅವರು ನೋಡಿದ್ದು ಏನು? ಒಂದು ಕ್ರಿಕೆಟ್ ಚೆಂಡು ಮತ್ತೊಂದು ಯುಗಾದಿ ಚಂದ್ರ! ಈ ಸೃಷ್ಟಿಯ ಪ್ರಕ್ರಿಯೆಯಲ್ಲಿ ನಿಸರ್ಗವು ಭೂಮಿಯಿಂದ ಬ್ರಹ್ಮಾಂಡದ ಬೌಂಡರಿಗೆ ಎಸೆದ ಚೆಂಡೇ ಆಗಸದ ಚಂದ್ರ. ಅದನ್ನು ಸ್ಪಿನ್ನಿಂಗ ಬಾಲ್ ಎಂದರೂ ತಪ್ಪಲ್ಲ. ಅದನ್ನು ಹಿಡಿಯುವ ನಿರಂತರ ಪ್ರಯತ್ನದಲ್ಲಿ ತೊಡಗಿರುವವರೇ ನಮ್ಮ 'ಚಂದ್ರಯಾನ'ದ ವಿಜ್ಞಾನಿಗಳು!



ಈ ವರ್ಷದ ಯುಗಾದಿ ಹಬ್ಬಕ್ಕೆ ಭಾರತೀಯ ಕ್ರಿಕೆಟ್ ತಂಡದ ಬಂಪರ್ ಕೊಡುಗೆ - ವಿಶ್ವಕಪ್ 2011 ! ಇದೇನು ಯುಗಾದಿಯೋ ದೀಪಾವಳಿಯೋ ಎಂಬಂತೆ ಎಲ್ಲೆಡೆ ಪಟಾಕಿಗಳ ಆರ್ಭಟ! ಗಡಿಪ್ರದೇಶಗಳಲ್ಲಿ ಶತ್ರುಸೈನ್ಯಗಳ ಮಧ್ಯೆ ನಡೆಯುವ ಮದ್ದುಗುಂಡುಗಳ ಆರ್ಭಟವನ್ನೂ ನಾಚಿಸುವಷ್ಟು ಭೀಕರ ಸದ್ದು.

ಪಟಾಕಿ ಹೊಡೆಯುವ ಪದ್ಧತಿ ನಮ್ಮ ದೇಶದಲ್ಲಿ ಯಾವಾಗ ಬಂತೋ ಏನೋ ಅದರ ಇತಿಹಾಸದ ಗೊಡವೆಗೆ ಹೋಗುವುದಿಲ್ಲ. ಅದರ ಶಬ್ದ ಕೇಳಿದಾಕ್ಷಣವೇ ದೀಪಾವಳಿ ಹಬ್ಬ ನೆನಪಾಗುವುದು ಸಹಜ. ಆದರೆ ಇತ್ತೀಚೆಗೆ ಪಟಾಕಿ ಹೊಡೆಯುವುದು ದೀಪಾವಳಿಗೆ ಮಾತ್ರ ಮೀಸಲಾಗಿಲ್ಲ. ಕ್ರಿಕೆಟ್ ಆಟದಲ್ಲಿ ಗೆದ್ದಾಗ ಆಟಗಾರರ ಅಭಿಮಾನಿಗಳು ಪಟಾಕಿ ಸಿಡಿಸಿ ಖುಷಿಪಡುತ್ತಾರೆ. ಚುನಾವಣೆಯಲ್ಲಿ ಗೆದ್ದ ಅಭ್ಯರ್ಥಿಗಳ ಬೆಂಬಲಿಗರೂ ಸಹ ಖುಷಿಗಾಗಿ ಪಟಾಕಿ ಹೊಡೆಯುತ್ತಾರೆ. ಪಟಾಕಿ ಹೊಡೆಯುವುದು ಎಂಬುದಕ್ಕೆ ಹೀನಾರ್ಥವೂ ಇದೆ. ಅದು ಹೇಗೆ ಬಂತೋ ಏನೋ ಭಾಷಾತಜ್ಞರು ಚಿಂತಿಸುವುದೊಳಿತು. ಅಂತೂ ಜನರ ಆಡುಮಾತಿನಲ್ಲಿ 'ಅವನು ಬಹಳ ಪಟಾಕಿ ಹೊಡೆಯುತ್ತಾನೆ' ಎಂದರೆ ಅವನು ತುಂಬಾ ಜಂಬ ಕೊಚ್ಚಿಕೊಳುತ್ತಾನೆ, ಅವನ ಮಾತನ್ನು ನಂಬಬಾರದು ಎಂಬ ಮೂದಲಿಕೆಯ ಭಾವ ಇರುವುದು ಖಚಿತ. 'ಪಟಾಕಿ ಹಾರಿಸುವುದು' ಮತ್ತು 'ಪಟಾಕಿ ಹೊಡೆಯುವುದು' ಎರಡೂ ನಮ್ಮ ದೇಶದಲ್ಲಿಯೇ ಜಾಸ್ತಿ. ನಮ್ಮ ದೇಶದಲ್ಲಿರುವಷ್ಟು ಸ್ವಾತಂತ್ರ್ಯ ಬೇರೆ ಯಾವ ದೇಶಗಳಲ್ಲಿಯೂ ಇಲ್ಲ. ಪರದೇಶಗಳಲ್ಲಿ ಸ್ವಾತಂತ್ರ್ಯದಿನಾಚರಣೆ, ಕ್ರಿಸ್‌ಮಸ್ ಮತ್ತಿತರ ಸಂದರ್ಭಗಳಲ್ಲಿ ಪಟಾಕಿ ಹೊಡೆಯುವುದು ಇದ್ದರೂ ಅದನ್ನು ನೋಡಬಹುದೇ ಹೊರತು ಸ್ವತಃ ಹೊಡೆಯುವ ಸ್ವಾತಂತ್ರ್ಯ ಅಲ್ಲಿಯ ನಾಗರಿಕರಿಗೆ ಇಲ್ಲ. ಆ ದೇಶಗಳಲ್ಲಿ ಪಟಾಕಿ ಹಾರಿಸುವುದಕ್ಕಾಗಿಯೇ ಕಂಪನಿಗಳು ಇರುತ್ತವೆ. ಸಾರ್ವಜನಿಕರ ಸುರಕ್ಷತೆಯ ದೃಷ್ಟಿಯಿಂದ ಅಂತಹ ಕಂಪನಿಗಳಿಗೆ ಸರಕಾರದವರು ಕಾಂಟ್ರ್ಯಾಕ್ಟ್ ಕೊಡುತ್ತಾರೆ. ಅದನ್ನು ನೋಡಲೆಂದೇ ನಿಗದಿತ ಸಮಯಕ್ಕೆ ಜನರು ಉದ್ಯಾನವನಗಳಿಗೆ ಸಾಲುಗಟ್ಟಿ ಧಾವಿಸುತ್ತಾರೆ. ಗುಂಪುಗುಂಪಾಗಿ ನಿಂತು ನಿರ್ದಿಷ್ಟ ವೇಳೆಗೆ ನಿಯಮಿತ ಅವಧಿಯಲ್ಲಿ ಬಣ್ಣ ಬಣ್ಣದ ಪಟಾಕಿ ಹಾರಿಸುವುದನ್ನು ನೋಡಿ ಸಂತೋಷಪಡುತ್ತಾರೆ.

ಕಳೆದ ಮಾರ್ಚ್ 30 ರಂದು ಶರಣಸಾಹಿತ್ಯ ಪರಿಷತ್ತಿನ ಬೆಳ್ಳಿಹಬ್ಬದ ನಿಮಿತ್ತ ಮೈಸೂರಿಗೆ ಹೋದಾಗ ಸಂಜೆ ಫ್ರಾನ್ಸ್ ದೇಶದ ಪ್ರಸಿದ್ಧ ಸಂಸ್ಕೃತ ವಿದ್ವಾಂಸರಾದ ಪ್ರೊಫೆಸರ್ ಪಿಯರ್-ಸಿಲ್ವಾನ್ ಫಿಲಿಯೋಜಾ ಅವರು ತಮ್ಮ ಆಪ್ತಸಹಾಯಕ ಪಂಡಿತ ಋಷಿದೇವ್ ಅವರೊಂದಿಗೆ ಬಂದಿದ್ದರು. ಪಾಣಿನಿಯ ವ್ಯಾಕರಣ ಸೂತ್ರಗಳ ಆಧಾರದ ಮೇಲೆ ನಾವು ಸಿದ್ಧಪಡಿಸಿರುವ 'ಗಣಕಾಷ್ಟಾಧ್ಯಾಯೀ' ತಂತ್ರಾಂಶ ಕುರಿತು ಸುದೀರ್ಘ ಸಂವಾದ ನಡೆಯಿತು. ಕಾಶಿಕಾ, ಪದಮಂಜರೀ, ನ್ಯಾಸ ಇತ್ಯಾದಿ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ಪಾಣಿನಿಯ ಅನೇಕ ಜಟಿಲ ಸೂತ್ರಗಳನ್ನು ಅರ್ಥೈಸಿಕೊಂಡು ತಂತ್ರಾಂಶವನ್ನು ಯಶಸ್ವಿಯಾಗಿ ಪರಿಷ್ಕರಿಸಿ ಸಂತೋಷದಿಂದ ಮೇಲೇಳುವ ಹೊತ್ತಿಗೆ ರಾತ್ರಿ 10 ಗಂಟೆಯಾಗಿತ್ತು. ಅಪರೂಪಕ್ಕೆ ಶಿಷ್ಯರಾರೂ ಮಧ್ಯೆ ಬಂದು ನಮ್ಮ ಸಂವಾದಕ್ಕೆ ತೊಂದರೆಯುಂಟುಮಾಡಲಿಲ್ಲ. ಆಗ ದಿಢೀರನೆ ಪಟಾಕಿಗಳ ಸದ್ದು ಕಿವಿಗಡಚಿಕ್ಕುವಂತೆ ಕೇಳಿಸಿತು. ಮೊಹಾಲೆಯಲ್ಲಿ ನಡೆದ ಕ್ರಿಕೆಟ್ ಪಂದ್ಯದಲ್ಲಿ ಭಾರತದ ತಂಡ ಪಾಕಿಸ್ತಾನದ ತಂಡವನ್ನು ಸೋಲಿಸಿತ್ತು. ಶಿಷ್ಯರು ಗುರುದರ್ಶನಕ್ಕಿಂತ ದೂರದರ್ಶನಕ್ಕಾಗಿ ಕಾತುರರಾಗಿದ್ದರು ಎಂಬ ರಹಸ್ಯ ಸಂಗತಿ ಆಗ ಹೊರಬಿತ್ತು. ಪಾಣಿನಿಯು ಹುಟ್ಟಿದ್ದು ಕ್ರಿ.ಪೂ. 5ನೆಯ ಶತಮಾನದಲ್ಲಿ. ಈಗ ಪಾಕಿಸ್ತಾನದಲ್ಲಿರುವ 'ಶಲಾತುರ' ಎಂಬ ಸ್ಥಳದಲ್ಲಿ ಎಂಬ ಸಂಗತಿ ಅದೆಷ್ಟು ಜನ ಶಿಷ್ಯರಿಗೆ ಗೊತ್ತಿದೆ! ಆ ಸ್ಥಳದಲ್ಲಿ ಪಾಣಿನಿಯ ವಿಗ್ರಹವನ್ನು ನೋಡಿದ್ದಾಗಿ ಕ್ರಿ.ಶ 7ನೆಯ ಶತಮಾನದ ಚೀನಾ ಪ್ರವಾಸಿಗ ಹ್ಯೂನ್‌ತ್ಸಾಂಗ್ ತನ್ನ ಪ್ರವಾಸಕಥನದಲ್ಲಿ ದಾಖಲಿಸಿದ್ದಾನೆ.

ಜಗತ್ತಿನಲ್ಲಿ ಒಬ್ಬೊಬ್ಬರಿಗೆ ಒಂದೊಂದು ಹುಚ್ಚು ಇರುತ್ತದೆ ಎನ್ನುತ್ತಾರೆ. ಆದರೆ ಆಬಾಲವೃದ್ಧರಾಗಿ ಇಂದು ಬಹುತೇಕ ಜನರಿಗೆ ಇರುವ ಒಂದು ವಿಶೇಷ ಹುಚ್ಚೆಂದರೆ ಕ್ರಿಕೆಟ್! ಆಫೀಸು, ಮನೆ, ಆಸ್ಪತ್ರೆ, ಹೋಟೆಲ್, ಬಸ್ಸು-ರೈಲು-ವಿಮಾನ ನಿಲ್ದಾಣ, ಎಲ್ಲೆಂದರೆ ಅಲ್ಲಿ ಕ್ರಿಕೆಟ್ ಹುಚ್ಚರ ಆತ್ಮೀಯ ಸಂಭಾಷಣೆ. ಅವರು ತನ್ಮಯತೆಯಿಂದ

ಜಪಿಸುವ ಏಕೈಕ ಮಂತ್ರ 'ಸ್ಕೋರ್ ಎಷ್ಟು'? ಇದರಿಂದ 'ರಾಜಕೀಯ ಕದನವಿರಾಮ' ಉಂಟಾದರೂ ಆಶ್ಚರ್ಯಪಡಬೇಕಾಗಿಲ್ಲ. ಜ್ವರ ಬಂದಾಗ ಆಫೀಸಿಗೆ ಹೋಗದೆ ಮನೆಯಲ್ಲಿ ವಿಶ್ರಾಂತಿ ಪಡೆದು ವೈದ್ಯರ ಸರ್ಟಿಫಿಕೇಟ್ ಕೊಟ್ಟರೆ ಮೇಲಧಿಕಾರಿಗಳಿಂದ ರಜಾ ಮುಂಜೂರು ಆಗುತ್ತದೆಯೋ ಇಲ್ಲವೋ ಹೇಳಲಾಗದು. ಆದರೆ 'ಕ್ರಿಕೆಟ್‌ಜ್ವರ' ಬಂದು ಮನೆಯಲ್ಲಿದ್ದರೆ ಆಫೀಸಿಗೆ ರಜಾ ಹಾಕದೇ ಇದ್ದರೂ ನಡೆಯುತ್ತದೆ. ಏಕೆಂದರೆ ತನಿಖೆ ಮಾಡುವ ಮೇಲಧಿಕಾರಿಗಳಿಗೂ ಅದೇ 'ಕ್ರಿಕೆಟ್‌ಜ್ವರ' ಬಂದು ಬಳಲುತ್ತಿರುವುದರಿಂದ ಅವರು ನಿಮ್ಮ 'ಅನಿವಾರ್ಯತೆ'ಯನ್ನು ಸುಲಭವಾಗಿ ಅರ್ಥಮಾಡಿಕೊಳ್ಳುತ್ತಾರೆ!

ಕಳೆದ ಶನಿವಾರ ರಾತ್ರಿ ಭಾರತದ ಆಬಾಲವೃದ್ಧರೆಲ್ಲರಿಗೂ ರೋಮಾಂಚನದ ಕ್ಷಣಗಳು. ಎಲ್ಲರನ್ನೂ ಕ್ರಿಕೆಟ್ ಮಾಯೆ ಆವರಿಸಿದ ರಾತ್ರಿ ಅದು. ಸೋಮವಾರ ಯುಗಾದಿಯಂದು ಪಾದಾರ್ಪಣೆ ಮಾಡಿದ 'ಖರ' ಸಂವತ್ಸರವನ್ನು ಸಡಗರದಿಂದ ಬರಮಾಡಿಕೊಳ್ಳಲು ಮನೆಮನೆಗಳಲ್ಲಿ ತಳಿರು ತೋರಣಗಳ ಶೃಂಗಾರ, ಅಡಿಗೆ ಮನೆಗಳಿಂದ ತೂರಿ ಬರುತ್ತಿದ್ದ ಒಬ್ಬಟ್ಟಿನ ಘಮ ಘಮ, ಮೆಲ್ಲಲು ಬೇವು ಬೆಲ್ಲದ ಸಿದ್ಧತೆಯ ತರಾತುರಿ, ಧರಿಸಲು ತರಾವರಿ ಹೊಸ ಉಡುಪುಗಳು - ಇವೆಲ್ಲಕ್ಕೂ ಕ್ರಿಕೆಟ್‌ನಲ್ಲಿ ವಿಶ್ವಕಪ್ ಹೆಗಲಿಗೇರಿಸಿಕೊಂಡ ಭಾರತ ತಂಡದ ಮಹತ್ಸಾಧನೆ ಗರಿಮೂಡಿಸಿತ್ತು. ಕ್ರಿಕೆಟ್ ಗೆದ್ದದ್ದು ಕೇವಲ ಹನ್ನೊಂದು ಮಂದಿಯ ತಂಡ ಅಲ್ಲ; ಇಡೀ ಭಾರತ ಎಂಬ ಹೆಮ್ಮೆಯ ಭಾವ. ಭಾರತ ಗೆಲ್ಲಲಿ ಎಂದು ವ್ರತ ಹಿಡಿದವರು, ಹೋಮ ಹವನ ಮಾಡಿಸಿದವರು, ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದವರು, ನಮಾಜು ಮೂಲಕ ಪ್ರಾರ್ಥನೆ ಸಲ್ಲಿಸಿದವರು, ದೂರದರ್ಶನದ ಸೆಟ್‌ಗಳ ಮುಂದೆ ಆಟವನ್ನು ನೋಡಲು ಆನಂದ, ಆತಂಕ, ನಿರೀಕ್ಷೆಗಳಿಂದ ಕಣ್ಣು ಅಂಟಿಸಿಕೊಂಡು ಕುಳಿತವರು.... ಹೀಗೆ ಇಡೀ ದೇಶ ಆಟದಲ್ಲಿ ಪಾಲುಗೊಂಡಿತು, ಸೆಣಸಿತು, ಗೆದ್ದಿತು. ಜನರಲ್ಲಿನ ಉತ್ಕಟ ದೇಶಪ್ರೇಮವು ಕೆಂಡಕ್ಕೆ ಸುರಿದ ಸಾಮ್ರಾಣಿಯಂತೆ ವಿಶ್ವಾದ್ಯಂತ ಪಸರಿಸಿ ಪರಿಮಳಿಸಿತು. ಆರುತಿಂಗಳ ಹಿಂದೆ ನಮ್ಮ ಆಶೀರ್ವಾದ ಪಡೆದು ಹೋಗಿ ದೂರದ ಇಂಗ್ಲೆಂಡಿನಲ್ಲಿ ಓದುತ್ತಿರುವ ದಾವಣಗೆರೆಯ ನಮ್ಮ ಶಿಷ್ಯರೊಬ್ಬರ ಮಗಳು ಪ್ರಿಯಾಂಕಾ ಪಾಕಿಸ್ತಾನ ಮತ್ತು ಶ್ರೀಲಂಕಾದ ಗೆಳತಿಯರೊಂದಿಗೆ ದೂರದರ್ಶನದಲ್ಲಿ ನೋಡುತ್ತಿರುವಾಗ 'I felt hilarious' ಎಂದು ಇ-ಮೇಲ್ ಕಳುಹಿಸಿರುತ್ತಾಳೆ.

ನಮ್ಮ ಜನ ಸಾಮಾಜಿಕ ಮತ್ತು ಕೌಟುಂಬಿಕ ಬದುಕಿನಲ್ಲಿ ಏಕೆ ಇಂಥ ಉತ್ಕಟ ಪ್ರೇಮವನ್ನು ಮೆರೆಯುವುದಿಲ್ಲ ಎಂಬುದು ಮಾತ್ರ ವಿಷಾದದ ಸಂಗತಿಯಾಗಿದೆ. ದೇಶದ ಸಾಮಾಜಿಕ ಬದುಕಿನಲ್ಲಿ ಸಡಗರ ಸಂಭ್ರಮ ಪಡಬಹುದಾದ ಸಂದರ್ಭಗಳು ಅಡಿಗಡಿಗೆ ಬರುತ್ತಲೇ ಇರುತ್ತವೆ. ಆದರೆ ಅಂಥ ಸಂದರ್ಭಗಳು ಜನಸ್ಪಂದನವಿಲ್ಲದೆ ಕೇವಲ ಸರ್ಕಾರಿ ಮಟ್ಟದಲ್ಲಿ ಮಾತ್ರ ಆಚರಿಸುವ 'ಶಾಸ್ತ್ರ'ಗಳಾಗಿ ಮುಗಿದು ಹೋಗುತ್ತವೆ. ನಮ್ಮ ದೇಶದ ಧಾರ್ಮಿಕ ಆಚರಣೆಗಳು ಆಯಾ ಧರ್ಮೀಯರು ಮಾತ್ರ ಆಚರಿಸುವ ಮತ್ತು ಅನ್ಯ ಧರ್ಮೀಯರು ಅಸಹನೆ ಪಡುವ ಮಟ್ಟಕ್ಕೆ ಬೆಳೆದು ನಿಂತಿವೆ. ಎಷ್ಟೋ ವೇಳೆ ಪೋಲೀಸು ಇಲಾಖೆ ಕಣ್ಣಲ್ಲಿ ಎಣ್ಣೆ ಹಾಕಿಕೊಂಡು, ಅಂಗೈಯಲ್ಲಿ ಜೀವ ಹಿಡಿದು ಗಲಭೆಗಳಾಗದಂತೆ ತಡೆಯಲು ಹರಸಾಹಸ ಮಾಡಬೇಕಾಗುತ್ತದೆ.

ಪದ್ಧತಿ ಪ್ರಕಾರ ಮೊನ್ನೆ ಚಂದ್ರದರ್ಶನ ಮಾಡಿದ ಶಿಷ್ಯರು ಸಕುಟುಂಬ ಪರಿವಾರ ನಮ್ಮ ಆಶೀರ್ವಾದಕ್ಕೆಂದು ಮಠಕ್ಕೆ ಬಂದಿದ್ದರು. ಅವರ ಜೊತೆಯಲ್ಲಿ ಬಂದಿದ್ದ ಮಕ್ಕಳೊಂದಿಗೆ ಸರಸ ಸಂಭಾಷಣೆ ನಡೆಸುವಾಗ ನಮಗೆ ಮನವರಿಕೆಯಾಗಿದ್ದು ಕ್ರಿಕೆಟ್ ಬಗ್ಗೆ ನಮಗಿರುವ ಅಜ್ಞಾನ. ಭಾರತದ ತಂಡ ವಿಶ್ವಕಪ್ ಪಡೆದದ್ದು ಇದೇ ಮೊದಲನೆಯ ಬಾರಿಯೇ ಎಂದು ಕೇಳಿದಾಗ ಬಾಲಕರು ನಕ್ಕು, 'ಇಲ್ಲ, ಇದು ಎರಡನೆಯ ಬಾರಿ' ಎಂದು ಏಕಕಂಠದಿಂದ ಉತ್ಸಾಹಭರಿತರಾಗಿ ಏರುದನಿಯಲ್ಲಿ ಉತ್ತರಿಸಿದರು. ಮೊದಲನೆಯ ಬಾರಿ ಗೆದ್ದದ್ದು ಯಾವಾಗ ಎಂದು ಕೇಳಿದಾಗ ಮೂರನೇ ತರಗತಿಯ ಬಾಲಕನೊಬ್ಬ 1983 ರಲ್ಲಿ ಎಂದು ತಟ್ಟನೆ ಉತ್ತರಿಸಿದ. ಆಗಿನ್ನೂ ಆ ಹುಡುಗ ಹುಟ್ಟೇ ಇರಲಿಲ್ಲ! ಅವನಿಗೆ ಕ್ರಿಕೆಟ್‌ತಂಡಗಳ ನಾಯಕರುಗಳಾದ ಭಾರತದ ಧೋನಿ, ಪಾಕಿಸ್ತಾನದ ಅಫ್ರೀದಿ, ಶ್ರೀಲಂಕಾದ ಸಂಗಕ್ಕಾರ ಇವರೆಲ್ಲರ ಹೆಸರುಗಳು ಗೊತ್ತಿದ್ದವು (ಅವನಿಂದ ಕೇಳಿ ಟಿಪ್ಪಣಿ ಮಾಡಿಕೊಂಡೇ ಈ ಹೆಸರುಗಳನ್ನು ಇಲ್ಲಿ ಬರೆಯುವ ಸಾಹಸ ಮಾಡಲಾಗಿದೆ!). ಕ್ರಿಕೆಟ್ ಮೈದಾನದಲ್ಲಿ legside, offside, cover, silly ಇತ್ಯಾದಿ ವಿವಿಧ ಭಾಗಗಳಿವೆ ಎಂದು ನಮಗೆ ಗೊತ್ತಾಗಿದ್ದೇ ಮೊನ್ನೆ ಈ ಮಕ್ಕಳೊಂದಿಗೆ ಮಾತನಾಡುವಾಗ. ಸಿಲ್ಲಿಯಲ್ಲಿ ನಿಂತವನ ಕೈಗೆ ಚೆಂಡು ಸಿಗದಂತೆ ಹೇಗೆ ಬ್ಯಾಟ್ಸ್‌ಮನ್ ಹೊಡೆದ ಎಂದು ಆ ಬಾಲಕ ವಿವರಿದ. ಸಿಲ್ಲಿ ಅಂದರೆ ಏನೆಂದು ಕೇಳುವ ಗೋಜಿಗೆ ಹೋಗಲಿಲ್ಲ. ಅವನಿಗೆ 'ಸಿಲ್ಲಿ' ಪ್ರಶ್ನೆಯಾಗಿ ಕಾಣಿಸಬಹುದೆಂದು ಕೇಳುವ ಧೈರ್ಯ ಮಾಡಲಿಲ್ಲ. ಕ್ರಿಕೆಟ್ ವಿಷಯವಾಗಿ ಪರೀಕ್ಷೆಯಲ್ಲಿ ಹತ್ತು ಪ್ರಶ್ನೆಗಳನ್ನು ಕೊಟ್ಟು ಅವುಗಳಲ್ಲಿ ಯಾವುದಾದರೂ ಐದಕ್ಕೆ ಉತ್ತರ ನೀಡಿ ಎಂದು ಕೇಳಿದರೆ ಹತ್ತೂ ಪ್ರಶ್ನೆಗಳಿಗೆ ಉತ್ತರ ಕೊಟ್ಟು ಅವುಗಳಲ್ಲಿ ಯಾವುದಾದರೂ ಐದನ್ನು ನೀವೇ ಆಯ್ಕೆ ಮಾಡಿಕೊಳ್ಳಿ ಎಂದು ಪರೀಕ್ಷಕರಿಗೇ ಸವಾಲು ಹಾಕುವಷ್ಟು ಛಾತಿಯನ್ನು ಇಂದಿನ ಪೀಳಿಗೆ ಹೊಂದಿದೆಯೆಂದರೆ ಆಶ್ಚರ್ಯಪಡಬೇಕಾಗಿಲ್ಲ. ಮೂರನೇ ತರಗತಿಯ ಬಾಲಕರಿಗೆ ಅವರ ಪಠ್ಯಗ್ರಂಥಗಳ ವಿಷಯವಾಗಿ ಇದ್ದ ಜ್ಞಾನಕ್ಕಿಂತ ಹೆಚ್ಚಿನ ಜ್ಞಾನ ಕ್ರಿಕೆಟ್ ವಿಷಯವಾಗಿ ಇತ್ತು. ಇದನ್ನೆಲ್ಲಾ ಅವರು ಕಲಿತದ್ದು ಎಲ್ಲಿ, ಯಾವಾಗ ಮತ್ತು ಹೇಗೆ? ಯಾವ ಫೀಸೂ ಕೊಡದೆ ಯಾರಿಂದ ಹೇಗೆ ಖಾಸಗಿ ಪಾಠ ಹೇಳಿಸಿಕೊಂಡರು? ಶಿಕ್ಷಣ ಇಲಾಖೆ ಈ ನಿಟ್ಟಿನಲ್ಲಿ ಸಂಶೋಧನೆ ನಡೆಸಿದರೆ ಮಕ್ಕಳಿಗೆ ಶಾಲೆಯಲ್ಲಿ ಪರಿಣಾಮಕಾರಿಯಾಗಿ ಬೋಧನೆ ಮಾಡಲು ಹೊಸ ತಿರುವು ಸಿಗಬಹುದೆಂದು ತೋರುತ್ತದೆ.

ಮಕ್ಕಳೊಂದಿಗೆ ಮಾತನಾಡುವಾಗ ನಮಗೆ ನೆನಪಾಗಿದ್ದು ಶಂಕರಾಚಾರ್ಯರು ವಿರಚಿಸಿದ 'ಭಜಗೋವಿಂದಮ್' ಗ್ರಂಥದಲ್ಲಿ ಬರುವ ಈ ಕೆಳಗಿನ ಶ್ಲೋಕ:

**ಬಾಲಸ್ತಾವತ್ ಕ್ರೀಡಾಸಕ್ತಃ**
**ತರುಣಸ್ತಾವತ್ ತರುಣೀಸಕ್ತಃ ।**
**ವೃದ್ಧಸ್ತಾವತ್ ಚಿಂತಾಸಕ್ತಃ**
**ಪರೇ ಬ್ರಹ್ಮಣಿ ಕೋಽಪಿ ನ ಸಕ್ತಃ ॥**

**ಬಾಲಕರಿಗೆ ಆಟದ ಹುಚ್ಚು**
**ಯುವಕರಿಗೆ ಹೆಣ್ಣಿನ ಹುಚ್ಚು**
**ಮುದುಕರಿಗೆ ಚಿಂತೆಯ ಹುಚ್ಚು**

### ಆರಿಗೂ ಇಲ್ಲ ಪರಬ್ರಹ್ಮದ ಹುಚ್ಚು! - (ಭಜಗೋವಿಂದಮ್)

ಸಹೃದಯ ಓದುಗರೇ! ಶತಮಾನಗಳು ಉರುಳಿದರೂ ಮಕ್ಕಳ ಮನಸ್ಸು ಹಾಗೆಯೇ ಇದೆ. ಆದರೆ ಯುವಕರ ಮತ್ತು ಹಿರಿಯರ ಮನೋಧರ್ಮದಲ್ಲಿ ಮಾತ್ರ ವ್ಯತ್ಯಾಸ ಉಂಟಾಗಿದೆ. ಇಂದು ಶಂಕರಾಚಾರ್ಯರು ಬದುಕಿದ್ದರೆ ತಮ್ಮ ಈ ಶ್ಲೋಕವನ್ನು ಪರಿಷ್ಕರಿಸಿ ಈ ಆಧುನಿಕ ಯುಗದಲ್ಲಿ “ಆಸೇತುಹಿಮಾಚಲಪರ್ಯಂತಂ ಆಬಾಲವೃದ್ಧಾಃ ಕ್ರಿಕೆಟ್ಟಾಸಕ್ತಾಃ” ಆಬಾಲವೃದ್ಧರಿಗೆಲ್ಲಾ ಕ್ರಿಕೆಟ್ಟಿನ ಹುಚ್ಚು ಇದೆಯೇ ಹೊರತು ಯಾರಿಗೂ ಪರಬ್ರಹ್ಮದ ಹುಚ್ಚು ಇಲ್ಲವೆಂದು ಹೇಳುತ್ತಿದ್ದರೆಂಬುದರಲ್ಲಿ ಸಂದೇಹವಿಲ್ಲ.

**7.4.2011**

**ಶ್ರೀ ತರಳಬಾಳು ಜಗದ್ಗುರು**
**ಡಾ|| ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು**
**ಸಿರಿಗೆರೆ**